Sri K. R. ACHAR.—Is not the Madras Act repealed ?

Sri K. V. SHANKARA GOWDA.—It is repealed. I have said it.

Sri S. MUKUNDA RAO.—Sir, in reply to clause (*b*) of the question, it has been said that no library cess is being collected. But the section here is mandatory. The section says: "with effect from the date of commencement of the Act, the library cess, in the form of surcharge etc., shall be levied in the year within the jurisdiction of every city library authority and also in the district library authority, a cess shall be levied." Then the Act is mandatory. How can the Government say that the cess is not being collected all over ?

Sri K. V. SHANKARA GOWDA.—Sir, in some districts they have raised objection, that the local library authority is not appointed, the local library officer is not appointed and in the absence of such appointment, the local library authorities say that they cannot levy any cess and collect it. There is some legal complication in this. It is being examined and necessary steps will be taken early.

Sri C. BANDI GOWDA.—If the Madras Act is repealed and the Mysore Act does not apply to district of South Kanara, May I know under what Act the library authority is functioning ?

Sri K. V. SHANKARA GOWDA.—I am saying that the Mysore Act applies to it.

Mr. CHAIRMAN.—Sri R. S. Mahanta Shetty is permitted to put question No. 50 on behalf of Sri K. Channabasavana Gouda.

National Rural Water Supply Scheme

50. Sri R. S. MAHANTA SHETTY (Local Authorities' Constituency) [on behalf of SRI K. CHANNABASAVANA GOUDA (Local Authorities' Constituency)].—

Will the Minister for Development and Co-operation be pleased to state :—

the Villages where National Rural Water Supply Schemes would be implemented in 1968-69 in Bellary District ?

A.—Sri P. M. NADGOUDA (Minister for Development and Co-operation).—

The Villages wherein National Rural Water Supply Schemes that would be implemented during the year 1968-69 are under consideration.

Sri R. S. MAHANTA SHETTY.—May I know, the number of villages, where National Rural water supply scheme is to take place in the entire State ?

Mr. CHAIRMAN.—This question relates only to the Bellary District.

†Sri P. M. NADGOUDA.—I am prepared to supply the information Sir. ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ 3·20 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 490 ರಾಷ್ಟ್ರೀಯ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಂಡಿದೆ. ಇದರಲ್ಲಿ 125 ರಾಷ್ಟ್ರೀಯ ನೀರು ಸರಬರಾಜು ಯೋಜನೆಗಳನ್ನು ಮುಗಿಸಿದ್ದೇವೆ. 120 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1966-67ರಲ್ಲಿ ಇನ್ನುಳಿದ 365 ಯೋಜನೆಗಳ ಪೈಕಿ 115ನ್ನು ತೆಗೆದುಕೊಂಡಿದ್ದೇವೆ. 200 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. 33 ಯೋಜನೆಗಳು ಮುಗಿದಿವೆ. ಇದೇ ರೀತಿ ಇನ್ನೂ ತೆಗೆದುಕೊಳ್ಳಬೇಕೆಂದಿರುವ 447 ಯೋಜನೆಗಳಿಗೆ 272 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ 180 ಯೋಜನೆಗಳ ಎಸ್ಟಿಮೇಟ್ ತಯಾರಾಗಿ ಸರ್ಕಾರದ ಮಂಜೂರಾತಿಗಾಗಿ ಬಂದಿವೆ. ಆದರೆ ಆರ್ಥಿಕ ಮಂತ್ರಿಗಳು ಹಣವಿಲ್ಲವೆಂದು ವಾಪಸ್ ಕಳಿಸಿದ್ದಾರೆ. ಈ ಎರ್ಲಾ ಯೋಜನೆಗಳನ್ನು ಮುಗಿಸಬೇಕಾದರೆ 400 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಮಾನ್ಯ ಆರ್ಥಿಕ ಮಂತ್ರಿಗಳು ಈ ವರ್ಷಕ್ಕೆ ಈ ಬಾಬಿಗಾಗಿ ಕೇವಲ 17 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಈಗಿರುವ ಪರಿಸ್ಥಿತಿಯನ್ನು ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ.

2-45 P.M.

ಶ್ರೀ ಆರ್. ಎಸ್. ಮಹಂತಶೆಟ್ಟಿ.—ಮಾನ್ಯ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ 6000 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳು ಇಲ್ಲದಿರುವುದರಿಂದ, ಅವುಗಳನ್ನು ಒದಗಿಸಿಕೊಡಲು ಎಷ್ಟು ಹಣವನ್ನು ಒದಗಿಸಿದ್ದೀವೆ ಎಂಬುದನ್ನು ತಿಳಿಸಿದ್ದಾರೆ. ಇದುವರೆಗೆ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದ್ದೀರಾ ಎಂಬುದನ್ನು ಹೇಳುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ರಾಷ್ಟ್ರೀಯ ನೀರು ಸರಬರಾಜು ಯೋಜನೆ ಮತ್ತು ಗ್ರಾಮಾಂತರ ನೀರು ಸರಬರಾಜು ಯೋಜನೆ ಇವೆರಡು ಯೋಜನೆಗಳು ಬೇರೆ ಬೇರೆ ಇವೆ. ನಮ್ಮ ರಾಜ್ಯದೊಳಗೆ 3 ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ. ಸರ್ಕಾರದವರು ಈ ಹಳ್ಳಿಗಳಿಗೆ ಶೀಘ್ರದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲಿಕ್ಕೆ ರೊಕ್ಕ ಒದಗಿಸಿದ್ದಾರೆ. ಆದರೆ ರಾಷ್ಟ್ರೀಯ ನೀರು ಸರಬರಾಜು ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ.

ಶ್ರೀ ತೇಜಸಿಂಗ್ ರಾತೋಡ್.—ಜಿಲ್ಲಾವಾರು ಮಾಹಿತಿಗಳನ್ನು ಕೊಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಬಳ್ಳಾರಿ ಜಿಲ್ಲೆಯ ಬಗ್ಗೆ ಹೇಳಬೇಕಾದರೆ 14 ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಈ ಯೋಜನೆಗಳಿಗೆ 14,85,700 ರೂಪಾಯಿಗಳ ವೆಚ್ಚವಾಗುತ್ತದೆ ಮತ್ತು ಈ ಯೋಜನೆಗಳು ನಾನಾ ಹಂತಗಳಲ್ಲಿವೆ.

ಶ್ರೀ ವಿಶ್ವನಾಥಸ್ವಾಮಿ.—ಕಂಪ್ಲಿಯಲ್ಲಿ ರಾಷ್ಟ್ರೀಯ ನೀರು ಸರಬರಾಜು ಯೋಜನೆಯನ್ನು ಕೈಕೊಳ್ಳುವ ಬಗ್ಗೆ ಒಂದು ಪ್ರಪೋಸಲ್ ಸರ್ಕಾರಕ್ಕೆ ಬಂದಿದೆ. ಅದು ಯಾವ ಹಂತದಲ್ಲಿದೆ.

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರಕ್ಕೆ ಪ್ರಪೋಸಲ್ ಬಂದಿದೆ. ಈ ಯೋಜನೆಗೆ 25 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯ ಪ್ರಕಾರ 5 ಲಕ್ಷಕ್ಕೆ ಮೇಲ್ಪಟ್ಟ ಯೋಜನೆಗಳನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳಿಸಬೇಕಾಗುತ್ತದೆ. ರಾಷ್ಟ್ರೀಯ ನೀರು ಸರಬರಾಜು ಯೋಜನೆಗಾಗಿ ಈ ವರ್ಷಕ್ಕೆ ಸರ್ಕಾರದವರು 17 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅಂದಮೇಲೆ ಈ 25 ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೋ ಇಲ್ಲವೋ ಎಂಬುದನ್ನು ನೀವೇ ಯೋಚಿಸಿ.

ಶ್ರೀ ವಿಶ್ವನಾಥಸ್ವಾಮಿ.—ಈ ಯೋಜನೆಯನ್ನು ಮುಗಿಸುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಪಿ. ಎಂ. ನಾಡಗೌಡ.—ಮುಂದಿನ ಪಂಚವಾರ್ಷಿಕ ಯೋಜನೆಯ ನಕ್ಷೆ ರಾಜ್ಯ ಸರ್ಕಾರದ ಮುಂದೆ ಬಂದಾಗ ಎಷ್ಟು ಸಮಯ ಬೇಕಾಗುತ್ತದೆಂದು ಹೇಳಬಹುದು. ಆದರೆ ಈಗ ಹೇಳುವುದು ಕಷ್ಟ.

Sri KESHAVA RAO NITTURKAR.—May I know whether the National Rural Water Supply Scheme applies to towns consisting of a population of 20,000 people?

Sri P. M. NADGOUDA.—Yes Sir.